ಓ ಎಸ್ ನಂ.7/2023

ಪಿ.ಡಬ್ಲ್ಯು-1 ಸಯ್ಯದ್ ನಜಮಾ ಗಂಡ ಅಬ್ದುಲ್ ಕಾಲಿಕ್

(ಇಂದು ದಿನಾಂಕಃ **27-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಮ್. ಎ. ಜೆ. ವಕೀಲರಿಂದ.</u>

ಪ್ರತಿವಾದಿಗಳಲ್ಲಿ ಸೂರ್ಯಕಾಂತ ಸೊಲ್ಲಾಪುರದಲ್ಲಿ ವಾಸವಿರುತ್ತಾರೆ. ಮಹಿಬೂಬ ರವರು ಮುಂಬಯಿನಲ್ಲಿ ಇರುತ್ತಾರೆ ಎಂದರೆ ಸರಿ. ಸಿದ್ದರಾಮ ಮಣ್ಣೂರಿನಲ್ಲಿ ವಾಸವಿರುತ್ತಾರೆ. ಶಾವರಸಿದ್ದರವರು ಕತನೂರ ಎಂಬ ಊರಿನಲ್ಲಿ ಇರುತ್ತಾರೆ, ಆ ಊರಿನ ಹೆಸರು ನನಗೆ ನಿಖರವಾಗಿ ಹೇಳಲು ಆಗುತ್ತಿಲ್ಲ. ಉಳಿದ ಮೂರು ಜನ ಪ್ರತಿವಾದಿಗಳು ಮುಂಬಯಿನಲ್ಲಿ ಇರುತ್ತಾರೆ. ಏಳು ಜನ ಪ್ರತಿವಾದಿಗಳ ಸರಿಯಾದ ವಿಳಾಸ ನನಗೆ ಯಾವಾಗ ಗೊತ್ತಾಗಿರುತ್ತದೆ ಎಂದು ಹೇಳಲು ನನಗೆ ನೆನಪಿಲ್ಲ. ದಾವೆ ಹಾಕುವ ಮೊದಲು ಪ್ರತಿವಾದಿಗಳನ್ನು ನಾನು ನೋಡಿದ ಬಗ್ಗೆ ಹೇಳಲು ನೆನಪಿಲ್ಲ. ನಾನು ಖರೀದಿ ಪತ್ರಗಳನ್ನು ಪಡೆದ ನಂತರವೇ ನನಗೆ ಯಾರು ಯಾರಿಂದ ಜಮೀನು ಖರಿದೀಸಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಈ ದಾವೆ ಹಾಕುವ ಮೊದಲು ಪ್ರತಿವಾದಿಗಳನ್ನು ನಾನು ಭೇಟಿಯಾಗುವುದಾಗಲೀ ಅಥವಾ ಅವರಿಗೆ ನೋಟಿಸು ಕಳುಹಿಸುವುದಾಗಲೀ ಮಾಡಿಲ್ಲ ಎಂದರೆ ನನಗೆ ನೆನಪಿಲ್ಲ.

2. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿ 4ನೇ ಪ್ರತಿವಾದಿಯಾದ ಶಾವರಸಿದ್ದ ಆಗಿರುತ್ತಾರೆ. 4ನೇ ಪ್ರತಿವಾದಿಯನ್ನು ನ್ಯಾಯಾಲಯದಲ್ಲಿಯೇ ನೋಡಿರುತ್ತಿರಾ ಎಂದರೆ ಸಾಕ್ಷಿ ಮೊದಲು ನೋಡಿರಬಹುದು ನನಗೆ ನೆನಪಿಲ್ಲ ಎನ್ನುತ್ತಾರೆ. ಸಹಿದಾ ಬೇಗಂ ರವರು

ದಾವೆ ಹಾಕಿ ವಜಾಗೊಂಡ ದಾವೆಯಲ್ಲಿ ಯಾವ ಜಮೀನುಗಳು ಇದ್ದವು ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ಇವೆ ಜಮೀನು ಇದ್ದೀರಬಹುದು, ನನಗೆ ನೆನಪಿಲ್ಲ ಎನ್ನುತ್ತಾರೆ. ದಾವೆ ಹಾಕುವ ಮೊದಲು ಸಹೀದಾ ಬೇಗಂರವರನ್ನು ವಿಚಾರಣೆ ಮಾಡಿರುವುದಿಲ್ಲ. ದಾವೆ ಹಾಕುವ ಮೊದಲು ನಾನು ಪ್ರತಿವಾದಿಗಳನ್ನು ಭೇಟಿಯಾಗಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಹಾಕಲು ನನಗೆ ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಮತ್ತು ನಾವು ಯಾವತ್ತೂ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ ಸಾಕ್ಷಿ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎನ್ನುತ್ತಾರೆ. ನನ್ನ ಗಂಡ ಕಾಲಿಕ್ ರವರು ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದ ಕುರಿತು ನಾನು ಯಾವುದೇ ಕಂದಾಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ದಾವಾ ಆಸ್ತಿಗಳ ಮಾಲೀಕ ಇದ್ದ ಎಂದು ತೋರಿಸಲು ನಾನು ಯಾವುದೇ ಮ್ಯುಟೇಷನ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಾನು ನನ್ನ ಗಂಡನ ನಂತರ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇರುವ ಕುರಿತು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ನಾವು ಮಾಲೀಕರು ಮತ್ತು ಸ್ವಾಧೀನದಾರರು ಇರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಪ್ರತಿವಾದಿಗಳ ಮಾಲೀಕರು ಮತ್ತು ಸ್ವಾಧೀನದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಕಾಲಿಕ್ ರವರ ಜೊತೆಗೆ ನನ್ನ ಮದುವೆ ಆಗಿಲ್ಲ ಮತ್ತು ನಾನು ಅವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ

ಪ್ರತಿವಾದಿಗಳು ನಮಗೆ ಹಣ ಬಲದಿಂದ ಮತ್ತು ಜನ ಬಲದಿಂದ ತೊಂದರೆ ನೀಡುತ್ತಿದ್ದಾರೆ ಎನ್ನುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.